**ಕರ್ನಾಟಕ ವಿಧಾನ ಸಭೆ**
**ಹದಿನಾಲ್ಕನೇ ವಿಧಾನಸಭೆ**
**ಎಂಟನೇ ಅಧಿವೇಶನ**

# ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ಎರಡನೇ ತಿದ್ದುಪಡಿ) ವಿಧೇಯಕ, 2015

**(2015ರ ವಿಧಾನಸಭೆಯ ವಿಧೇಯಕ ಸಂಖ್ಯೆ – 32)**

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2007ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) 2007ನ್ನು (2007ರ ಕರ್ನಾಟಕ ಅಧಿನಿಯಮ 29) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ಎರಡನೇ ತಿದ್ದುಪಡಿ) ಅಧಿನಿಯಮ, 2015 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 6ನೇ ಪ್ರಕರಣದ ತಿದ್ದುಪಡಿ.–** ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2007ರ (2007ರ ಕರ್ನಾಟಕ ಅಧಿನಿಯಮ 29) 6ನೇ ಪ್ರಕರಣದಲ್ಲಿ,–

(i) (1)ನೇ ಉಪಪ್ರಕರಣದ ಎರಡನೇ ಪರಂತುಕಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"ಮತ್ತು ಪರಂತು, ಸೇವೆಯಲ್ಲಿರುವ ಮತ್ತು ವರ್ಗಾವಣೆ ಅರ್ಜಿಯನ್ನು ಸಲ್ಲಿಸುವುದಕ್ಕಾಗಿ ನಿಗದಿಪಡಿಸಿದ ಕೊನೆಯ ದಿನಾಂಕದಂದು ಒಂದು ಜ್ಯೇಷ್ಠತೆಯ ಘಟಕದಲ್ಲಿ ಐದು ವರ್ಷಗಳಿಗೆ ಕಡಿಮೆಯಲ್ಲದಂತೆ ಸೇವೆಯನ್ನು ಪೂರ್ಣಗೊಳಿಸಿದ ಶಿಕ್ಷಕನನ್ನು, ಆತನ ಕೋರಿಕೆಯ ಮೇರೆಗೆ, ಕೌನ್ಸಿಲಿಂಗ್ ಪ್ರಕ್ರಿಯೆಯ ಮೂಲಕ, ಜ್ಯೇಷ್ಠತೆಯ ಮತ್ತೊಂದು ಘಟಕಕ್ಕೆ, ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿದ ಗರಿಷ್ಠ ಪರಿಮಿತಿಗೊಳಪಟ್ಟು, ಆತನ ಸೇವೆಯಲ್ಲಿ ಒಂದು ಬಾರಿಗಿಂತ ಹೆಚ್ಚಿಲ್ಲದಂತೆ, ವರ್ಗಾಯಿಸಬಹುದು."

(ii) (2)ನೇ ಉಪಪ್ರಕರಣದ (4)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(5) ಶಿಕ್ಷಕನನ್ನು, ಆತನ ಕೋರಿಕೆಯ ಮೇರೆಗೆ, ಕೌನ್ಸಿಲಿಂಗ್ ಪ್ರಕ್ರಿಯೆಯ ಮೂಲಕ, ಜ್ಯೇಷ್ಠತೆ ಘಟಕದ ಹೊರಗೆ ಆತನ ಸಂಗಾತಿಯು ಕಾರ್ಯನಿರ್ವಹಿಸುತ್ತಿರುವ ಅನುದಾನಿತ ಶೈಕ್ಷಣಿಕ ಸಂಸ್ಥೆಯಲ್ಲಿನ ಅಂಥ ಸ್ಥಳ ಅಥವಾ ಹತ್ತಿರದ ಸ್ಥಳ ಅಥವಾ ಹುದ್ದೆಗೆ, ಆದರೆ ನಗರ ಪ್ರದೇಶವನ್ನು ಹೊರತುಪಡಿಸಿ, ವರ್ಗಾಯಿಸಬಹುದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಈ ಕೆಳಗಿನ, ಎಂದರೆ:-

(i) 04.05.2005ರ ತರುವಾಯ ನೇಮಕವಾದ ಶಿಕ್ಷಕರಿಗೆ ಸೇವೆಯಲ್ಲಿ ಒಂದು ಬಾರಿಗೆ ಜ್ಯೇಷ್ಠತೆಯ ಘಟಕದಿಂದ ಹೊರಗೆ ವರ್ಗಾವಣೆಯ ಅವಕಾಶವನ್ನು ಕಲ್ಪಿಸುವುದಕ್ಕಾಗಿ;

(ii) ಶಿಕ್ಷಕನಿಗೆ, ಜ್ಯೇಷ್ಠತೆ ಘಟಕದ ಹೊರಗೆ ಅನುದಾನಿತ ಶೈಕ್ಷಣಿಕ ಸಂಸ್ಥೆಯಲ್ಲಿ ಆತನ ಸಂಗಾತಿಯು ಕಾರ್ಯನಿರ್ವಹಿಸುತ್ತಿರುವ ಸ್ಥಳದಲ್ಲಿ ಆತನಿಗೆ ವರ್ಗಾವಣೆಯ ಅವಕಾಶವನ್ನು ಕಲ್ಪಿಸುವುದಕ್ಕಾಗಿ,

-ಉಪಬಂಧಗಳನ್ನು ಕಲ್ಪಿಸಲು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2007ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಕಿಮ್ಮನೆ ರತ್ನಾಕರ**
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

**ಎಂ. ಗುರುರಾಜ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

## ಅನುಬಂಧ

## ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2007ರ (2007ರ ಕರ್ನಾಟಕ ಅಧಿನಿಯಮ ಸಂಖ್ಯೆ 29) ಉದ್ಧೃತ ಭಾಗ

**Xx xx xx**

**6. ಒಂದು ಜೇಷ್ಠತಾ ಘಟಕದಿಂದ ಇನ್ನೊಂದು ಜೇಷ್ಠತಾ ಘಟಕಕ್ಕೆ ಶಿಕ್ಷಕರನ್ನು ವರ್ಗಾವಣೆ ಮಾಡುವುದಕ್ಕೆ ನಿಷೇಧ.**– (1) ಒಬ್ಬ ಶಿಕ್ಷಕನನ್ನು (2)ನೇ ಉಪಖಂಡದಲ್ಲಿ ನಿರ್ದಿಷ್ಟಪಡಿಸಿದ ಪ್ರಕರಣಗಳನ್ನು ಹೊರತುಪಡಿಸಿ ಆತ ನೇಮಕಗೊಂಡ ಒಂದು ಜೇಷ್ಠತಾ ಘಟಕದಿಂದ ಇನ್ನೊಂದು ಜೇಷ್ಠತಾ ಘಟಕಕ್ಕೆ ವರ್ಗಾವಣೆ ಮಾಡತಕ್ಕದ್ದಲ್ಲ:

ಪರಂತು, ಒಂದು ಜೇಷ್ಠತಾ ಘಟಕದಲ್ಲಿ ಹೆಚ್ಚುವರಿ ಎಂದು ಕಂಡು ಬಂದ ಒಬ್ಬ ಶಿಕ್ಷಕನನ್ನು ಇನ್ನೊಂದು ಜೇಷ್ಠತಾ ಘಟಕದಲ್ಲಿರುವ ಶಿಕ್ಷಕರು ಅಗತ್ಯವಿರುವ ಶಾಲೆಗೆ ಅಥವಾ ಪದವಿಪೂರ್ವ ಕಾಲೇಜಿಗೆ ವರ್ಗಾಯಿಸಬಹುದು ಅಥವಾ ಪುನಃ ನಿಯೋಜಿಸಬಹುದು:

ಮತ್ತು ಪರಂತು, ಸೇವೆಯಲ್ಲಿರುವ ಹಾಗೂ 04.05.2005 ರಂದು ಇರುವಂತೆ ಐದು ವರ್ಷಗಳಿಗಿಂತ ಕಡಿಮೆಯಲ್ಲದ ಸೇವೆಯನ್ನು ಪೂರ್ಣಗೊಳಿಸಿರುವ ಒಬ್ಬ ಶಿಕ್ಷಕನನ್ನು, ಸೇವಾವಧಿಯಲ್ಲಿ ಒಂದು ಬಾರಿ ಮಾತ್ರ ಆತನ ಬೇಡಿಕೆಯ ಮೇಲೆ ಇನ್ನೊಂದು ಜೇಷ್ಠತಾ ಘಟಕಕ್ಕೆ ಕೌನ್ಸಿಲಿಂಗ್ ಮೂಲಕ ವರ್ಗಾಯಿಸಬಹುದು.

(2) ಈ ಮುಂದಿನ ಪ್ರಕರಣಗಳಲ್ಲಿ (1)ನೇ ಉಪ ಪಕರಣದ ಉಪಬಂಧವನ್ನು ಸಡಿಲಗೊಳಿಸಬಹುದು, ಎಂದರೆ:– (1) ಗಂಡ, ಹೆಂಡತಿ ಇಬ್ಬರೂ ಸರ್ಕಾರಿ ನೌಕರರಾಗಿದ್ದಲ್ಲಿ ಮತ್ತು ಶಿಕ್ಷಕರು ಪ್ರಸ್ತುತ ಇರುವ ಜೇಷ್ಠತಾ ಘಟಕದಲ್ಲಿ ಕನಿಷ್ಠ ಮೂರು ವರ್ಷಗಳ ಸೇವೆಯನ್ನು ಸಲ್ಲಿಸಿದ್ದಲ್ಲಿ, ಕೌನ್ಸಿಲಿಂಗ್ ಮೂಲಕ ಆತನ/ಆಕೆಯ ಹೆಂಡತಿ/ಗಂಡ ಸೇವೆ ಸಲ್ಲಿಸುತ್ತಿರುವ ಸ್ಥಳಕ್ಕೆ ಅಥವಾ ಹತ್ತಿರದ ಸ್ಥಳಕ್ಕೆ ಸ್ಪಷ್ಟ ಖಾಲಿ ಸ್ಥಳದ ಲಭ್ಯತೆಯ ಆಧಾರದ ಮೇರೆಗೆ ಸೇವಾ ಅವಧಿಯಲ್ಲಿ ಎರಡು ಬಾರಿಗಿಂತ ಹೆಚ್ಚಲ್ಲದೆ ವರ್ಗಾವಣೆ ಮಾಡಬಹುದು.

(1ಎ) ಪರಸ್ಪರ ವರ್ಗಾವಣೆಗಳ ಸಂದರ್ಭದಲ್ಲಿ, ಇಬ್ಬರೂ ಶಿಕ್ಷಕರು ಕನಿಷ್ಠ ಮೂರು ವರ್ಷಗಳ ಸೇವಾ ಅವಧಿಯನ್ನು ಪೂರ್ಣಗೊಳಿಸಿದ ಷರತ್ತಿಗೆ ಒಳಪಟ್ಟು; ಆ ವಲಯಕ್ಕೆ ವರ್ಗಾಯಿಸಲು ಅನ್ಯಥಾ ಅರ್ಹನಾಗಿರುವ; ಕನಿಷ್ಠ ಮೂರು ವರ್ಷಗಳ ಸೇವೆಯು ಬಾಕಿ ಉಳಿದಿರುವ; ಆದರೆ ಅಂಥ ಪರಸ್ಪರ ವರ್ಗಾವಣೆಯು ಆತನ ಸೇವಾವಧಿಯಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಅನುಮತಿಸತಕ್ಕದ್ದಲ್ಲ ಹಾಗೂ ಆತನು ಜೇಷ್ಠತೆಯ ರಕ್ಷಣೆಗೆ ಅರ್ಹನಾಗಿರತಕ್ಕದ್ದಲ್ಲ.

(2) ಶಿಕ್ಷಕಿಯು ವಿಧವೆಯಾಗಿದ್ದಲ್ಲಿ ;

(3) ಶಿಕ್ಷಕನು ಅಂಗವಿಕಲನಾಗಿದ್ದಲ್ಲಿ ಅಥವಾ ಅಶಕ್ತನಾಗಿದ್ದಲ್ಲಿ;

(4) ಒಬ್ಬ ಶಿಕ್ಷಕನು ಅಥವಾ ಅವನ/ಅವಳ, ಗಂಡ/ಹೆಂಡತಿಯು ಅಥವಾ ಮಕ್ಕಳು ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದಲ್ಲಿ ಮತ್ತು ಅದಕ್ಕೆ ವೈದ್ಯಕೀಯ ಚಿಕಿತ್ಸೆಯು ಅವನು/ಅವಳು ಕಾರ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ದೊರೆಯದಿದ್ದಲ್ಲಿ ಮತ್ತು ಅವನಿಗೆ/ಅವಳಿಗೆ ವೈದ್ಯಕೀಯ ಚಿಕಿತ್ಸೆ ದೊರೆಯುವಂಥ ಸ್ಥಳಕ್ಕೆ ವರ್ಗಾವಣೆ ಮಾಡುವುದು ಅವಶ್ಯಕವಾಗಿರುವಲ್ಲಿ. ಆದಾಗ್ಯೂ ಚಿಕಿತ್ಸೆಯ ಸ್ವರೂಪ, ಅವನು/ಅವಳು ಕಾರ್ಯನಿರ್ವಹಿಸುತ್ತಿರುವ ಸ್ಥಳದಲ್ಲಿ ಸಂಬಂಧಪಟ್ಟ ಖಾಯಿಲೆಗೆ ವೈದ್ಯಕೀಯ ಚಿಕಿತ್ಸೆ ದೊರೆಯದಿರುವ ಬಗ್ಗೆ ಮತ್ತು ಅಂಥ ವೈದ್ಯಕೀಯ ಚಿಕಿತ್ಸೆ ದೊರೆಯುವ ಸ್ಥಳದ ಬಗ್ಗೆ ಮತ್ತು ಅವನು/ಅವಳು ಅಗತ್ಯ ವೈದ್ಯಕೀಯ ಚಿಕಿತ್ಸೆ ಪಡೆಯಲು ಅವರನ್ನು ಅಂಥ ಸ್ಥಳಕ್ಕೆ ವರ್ಗಾವಣೆ ಮಾಡುವುದು ಅವಶ್ಯಕವಿದೆ, ಎಂಬುದರ ಬಗ್ಗೆ ನಿರ್ದಿಷ್ಟವಾಗಿ ತಿಳಿಸಿರುವ ಜಿಲ್ಲಾ ವೈದ್ಯಕೀಯ ಮಂಡಳಿಯ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಶಿಕ್ಷಕನು/ಳು ಹಾಜರುಪಡಿಸಿದ ಹೊರತು ಅಂಥ ವರ್ಗಾವಣೆಯನ್ನು ಮಾಡತಕ್ಕದ್ದಲ್ಲ.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಪಿ7, ಕಾಸೂ , 750–ಪ್ರತಿಗಳು 30ನೇ ಜುಲೈ, 2015

**KARNATAKA LEGISLATIVE ASSEMBLY**

**FOURTEENTH LEGISLATIVE ASSEMBLY**

**EIGHTH SESSION**

# THE KARNATAKA STATE CIVIL SERVICES (REGULATION OF TRANSFER OF TEACHERS) (SECOND AMENDMENT) BILL, 2015

**(L.A. Bill No. 32 of 2015)**

A Bill further to amend the Karnataka State Civil Services (Regulation of transfer of teachers) Act, 2007.

Whereas it is expedient further to amend the Karnataka State Civil Services (Regulation of transfer of teachers) Act, 2007 (Karnataka Act 29 of 2007) for the purposes hereinafter appearing;

Be it enacted by the Karnataka State Legislature in the sixty-sixth year of the Republic of India, as follows:-

**1. Short title and commencement**.- (1) This Act may be called the Karnataka State Civil Services (Regulation of transfer of teachers) (Second Amendment) Act, 2015.

(2) It shall come into force at once.

**2. Amendment of section 6.-** In the Karnataka State Civil Services (Regulation of transfer of teachers) Act, 2007 (Karnataka Act 29 of 2007), in section 6,-

(i) in sub-section (1), for the second proviso the following shall be substituted, namely:-

"Provided further that a teacher who is in service and has completed not less than five years of service on the last day fixed for the submission of transfer application in a unit of seniority may on his request, be transferred through process of counseling to another unit of seniority not more than once in his service subject to ceiling limit specified in the Act."

(ii) in sub-section (2), after clause (4), the following shall be inserted, namely:-

"(5) The teacher may, on his request, be transferred through process of counseling to such place or near by place or post out side the unit of seniority where his spouse is working in an aided educational Institution but excluding an urban area."

## STATEMENT OF OBJECTS AND REASONS

It is considered necessary to amend the Karnataka State Civil Services (Regulation of transfer of teachers) Act, 2007,-

(i) to provide opportunity to transfer a teachers appointed after 04.05.2005, outside unit of seniority once in service

(ii) to provide transfer opportunity to the teachers to the place where his spouse is working in an aided educational institution outside the unit of seniority.

Hence, the Bill.

**FINANCIAL MEMORANDUM**

There is no extra expenditure involved in the proposed legislative measure.

**KIMMANE RATHNAKAR**
Minister for Primary and Secondary Education

**M. GURURAJA**
Secretary
Karnataka Legislative Assembly

## ANNEXURE

## THE KARNATAKA STATE CIVIL SERVICES (REGULATION OF TRANSFER OF TEACHERS) ACT, 2007

## (KARNATAKA ACT NO. 29 OF 2007)

**XXX XXX XXX**

**6. Prohibition of transfer of a teacher from one unit of seniority to another unit of seniority.**- (1) There shall be no transfer of a teacher from the unit of seniority in which he is appointed to another unit of seniority except in cases specified in sub-clause (2):

Provided that a teacher who is found surplus in an unit of seniority may be transferred or redeployed to a needy school or pre-university college in another unit of seniority:

Provided further that a teacher who is in service and has completed not less than five years of service as on 04.05.2005 in a unit of seniority to which he is initially appointed, may on his request, be transferred through counselling, to another unit of seniority not more than once in his service.

(2) The provision of sub-section (1) shall be relaxed in the following cases, namely:-

(1) Where both the spouses are Government Servants and the teacher has served for atleast three years service in the existing unit of seniority may also be transferred to the place or nearby place of working of his/her spouse by counselling, depending upon the availability of clear vacancy not more than twice in service.

(1A) In case of mutual transfers subject to conditions that both teachers must have completed minimum period of three years of service; must be otherwise eligible to be transferred to that zone; must have minimum three years of left over service; such mutual transfers shall not be allowed more than once in his service and he shall not be eligible for protection of seniority

(2) Where a female teacher is a widow;

(3) Where a teacher is physically handicapped or disabled;

(4) Where a teacher or his/her spouse or children are suffering from serious ailments, for which medical treatment is not available at his/her place of work and his/her transfer in necessary to a place where such treatment is available so as to provide him/her the required medical treatment. However, no transfer shall be made unless the teacher concerned produces a certificate from the District Medical Board specifying the nature of ailment, stating the fact that the required treatment is not available at his/her place of work, specifying the place where the required treatment is available and certifying that his/her transfer is necessary to such a place to provide him/her the required medical treatment.

**XXX XXX XXX**

Government Press, Vikasa Soudha, Bengaluru, P7, W.D. , Copies 750, 30th, 2015